

# ಕಾಳಿ ನದಿಯ ತೋಳಿನಲ್ಲಿ ಎರಡು ದಿನ



ಸದ್ದೇ ಇಲ್ಲದೆ ಅಮರಿಕೊಳ್ಳುವ ಜಿಗಣೆ

**ಕಾಳಿಯ ಹರಿವು ತುಂಬಾ ದೀರ್ಘವಾದುದಲ್ಲವಾದರೂ, ಆ ಮಧ್ಯಮ ನಡಿಗೆಯಲ್ಲೇ ನದಿ ಸೃಷ್ಟಿಸುವ ಚಿತ್ರಗಳು ಅಪೂರ್ವವಾದವು. ಕಾಳಿ ನದಿಗುಂಟ ನಡಿಗೆ ಪ್ರಾಕೃತಿಕ ಸೌಂದರ್ಯವನ್ನಷ್ಟೇ ಕಾಣಿಸುವುದಿಲ್ಲ; ಪರಿಸರದ ಮೇಲಿನ ಮನುಷ್ಯನ ಹಸ್ತಕ್ಷೇಪಕ್ಕೂ ಕನ್ನಡಿ ಹಿಡಿಯುತ್ತದೆ.**

■ **ಮಲ್ಲಿಕಾರ್ಜುನ ಹೊಸಪಾಳ್ಯ**

ಇತ್ತೀಚೆಗೆ ಎರಡು ದಿನ ಉತ್ತರಕನ್ನಡದ ಜೋಯಿಡಾ, ದಾಂಡೇಲಿ ಸುತ್ತ–ಮುತ್ತಲಿನ ಕಾಳಿ ನದಿಯ ಪರಿಸರದಲ್ಲಿ ಅಡ್ಡಾಡುವ ಅವಕಾಶ ಸಿಕ್ಕಿತ್ತು. ಕುಳಗಿ ಸಮೀಪದ ವೀಕ್ಷಣಾ ಗೋಪುರದಿಂದ ನಮ್ಮ ಸುತ್ತಾಟ ಆರಂಭ. ತುಂಬಾ ಅನೌಪಚಾರಿಕವಾಗಿತ್ತು ಈ ಸುತ್ತಾಟ. ನಮ್ಮದು ಪತ್ರಕರ್ತರು, ಶಿಕ್ಷಕರು, ಪರಿಸರ ಕಾರ್ಯಕರ್ತರು ಸೇರಿ 10 ಜನರ ಗುಂಪು. ಇದಕ್ಕೆ ಶಿರಸಿಯ ಪಾಂಡುರಂಗ ಹೆಗಡೆಯವರ ಮಾರ್ಗದರ್ಶನವಿತ್ತು.

ಕುಳಗಿಯಿಂದ ಹೊರಟು ಸಮೀಪದ ವೀಕ್ಷಣಾಗೋಪುರ ಹತ್ತಿದೆವು. ಉದ್ದಕ್ಕೂ ಹರಡಿದ ಕಾಳಿ ಕಣಿವೆ. ನೋಡುತ್ತಲೇ ಎದೆ ಧಸಕ್ಕೆಂದಿತು. ಕಣಿವೆಯ ಒಂದು ಭಾಗ ಗುಡ್ಡದ ಮೇಲಿಂದ ಕೆಳಗಿನವರೆಗೂ ಕುಸಿದಿತ್ತು. ಹಸಿರು ಗುಡ್ಡಕ್ಕೆ ಕೆಂಪು ನಾಮ ಎಳೆದಂತೆ. ಮುಂದೆ ಕಾಳಿಯ ಉಪನದಿ ಕಾನೇರಿ ನೋಡಿಕೊಂಡು, ಇನ್ನೊಂದು ಗುಡ್ಡ ಹತ್ತಿದೆವು. ಅಲ್ಲಿದ್ದ ವೀಕ್ಷಣಾಗೋಪುರವೇ ಕುಸಿಯುವ ಹಂತದಲ್ಲಿತ್ತು. ಯಾರೂ ಹತ್ತದಂತೆ ಬೇಲಿ ಹಾಕಿದ್ದರು.

ಮುಂದುವರಿದಂತೆ ಹೆಗಡೆಯವರು ಒಂದು ಕಡೆ ಗಾಡಿ ನಿಲ್ಲಿಸಿ 'ಸ್ವಲ್ಪ ದೂರ ನಡೆಯೋಣ' ಅಂದರು. ಬೆಳಿಗ್ಗೆಯಿಂದಲೂ ಹಾಗೇ ಮಾಡುತ್ತಿದ್ದೆವು. ಸ್ವಲ್ಪ ದೂರ ವಾಹನದಲ್ಲಿ ಪ್ರಯಾಣ, ಸ್ವಲ್ಪ ದೂರ ಕಾಡು ನೋಡುತ್ತಾ ನಡಿಗೆ. ಆದರೆ ಈ ಸಲ ಅವರ ಮುಖದಲ್ಲಿ ಸಣ್ಣ ನಗು. ರಸ್ತೆಯಲ್ಲಿ ಸ್ವಲ್ಪ ದೂರ ಹೋಗುತ್ತಿದ್ದಂತೆಯೇ ಎಲ್ಲರೂ ಎಗರಾಡತೊಡಗಿದರು. ನೋಡಿದರೆ ಜಿಗಣೆಗಳು. ಕಣ್ಣು ಮುಚ್ಚಿ ಕಣ್ಣು ತೆಗೆಯುವಷ್ಟರಲ್ಲಿ ಮೊಳಕಾಲವರೆಗೂ ಹತ್ತಿದ್ದವು. ಹೆಗಡೆಯವರ ನಗುವಿನ ಅರ್ಥ ಗೊತ್ತಾಯಿತು. ನಮಗೆ ಜಿಗಣೆಗಳ ಅನುಭವ ಆಗಲಿ ಎಂದೇ ಅವರು ಅಲ್ಲಿ ನಡೆಯಲು ಹೇಳಿದ್ದು.

ಉಳವಿಗೆ ಬಂದೆವು. ಚನ್ನಬಸವಣ್ಣ ಮತ್ತು ಇತರೆ ಶರಣರು ವಚನಗಳನ್ನು ರಕ್ಷಿಸಲು ತಂಗಿದ್ದ ಸ್ಥಳವದು. ಆ ಕಾರಣಕ್ಕಾಗಿಯೇ ಅದೊಂದು ಭಕ್ತಿ ಕೇಂದ್ರ. ಉಳವಿ ಸ್ವಚ್ಛವಾಗಿತ್ತು. ದೇವಾಲಯಕ್ಕೆ ಹೋಗುವ ಬಲಭಾಗದಲ್ಲಿ ಚನ್ನಬಸವಣ್ಣ ಹಾಗೂ ಅವರ ಶರಣ ತಂಡ ಕಲ್ಯಾಣದಿಂದ ಹೊರಟು ಉಳವಿಗೆ ಬರುವವರೆಗೂ ಸುಮಾರು ಒಂದು ವರ್ಷದ ಅವಧಿಯಲ್ಲಿ ನಡೆದ ಘಟನಾವಳಿಗಳ ವರ್ಣಚಿತ್ರಗಳನ್ನು ಪ್ರದರ್ಶಿದ್ದಾರೆ. ಅವರು ಸಾಗಿಬಂದ ದಾರಿಯ ನಕ್ಷೆಯೂ ಇದೆ. ಅದೊಂದು ಸಿನಿಮಾ ಚಿತ್ರಕಥೆಯಂತೆ ಭಾಸವಾಯಿತು. ಉಳವಿಗೆ ಹೋದವರು ನೋಡಲೇಬೇಕು.

